**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

O.S. No 257/2025
PW: 1

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 17.03.2026**

**ಮುಂದುವರೆದ ಪಾಟೀ ಸವಾಲು :01 ನೇ ಪ್ರತಿವಾದಿ ಪರ ವಕೀಲರಾದ: ಶ್ರೀ ಕೆ.ಎಸ್ ಆರ್ ರವರಿಂದ**

5. ರಾಯಪ್ಪರವರು 01 ನೇ ಪ್ರತಿವಾದಿಯ ಸಲ್ಲಿಸಿರುವ ದಾವೆಗಳ ಕುರಿತಂತೆ ನಾನು ನೋಡಿ ಕೇಳಿ ತಿಳಿದುಕೊಂಡಿರುವುದಿಲ್ಲ. 01 ನೇ ಪ್ರತಿವಾದಿಯ ಹಾಗೂ ನನ್ನ ಸ್ವತ್ತು ಬೇರೆ ಬೇರೆಯಾಗಿರುತ್ತದೆ. 01 ನೇ ಪ್ರತಿವಾದಿಯ ಸ್ವತ್ತು ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ರಾಯಪ್ಪರವರು 01 ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದ ಅಸಲು ದಾವಾ ಸಂಖ್ಯೆ 570/2007 ರಲ್ಲಿನ ದಾವಾ ಸ್ವತ್ತನ್ನು ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಹಂಚಿನ ಮನೆ ಇತ್ತು. ಸದರಿ ಮನೆಯು ಸುಮಾರು 5 ಚದುರ ಅಡಿ ಅಗಲವಿತ್ತು. ನಮ್ಮ ಕ್ರಯಪತ್ರದಲ್ಲಿ ಮನೆಯ ವಿಸ್ತೀರ್ಣ ವನ್ನು 675 ಚದುರ ಅಡಿ ಇತ್ತು ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ಎರಡು ದಾವಾ ಸ್ವತ್ತುಗಳು ಇರುತ್ತವೆ. ಸದರಿ ದಾವಾ ಸ್ವತ್ತುಗಳ ಮಧ್ಯದಲ್ಲಿ ಹಂಚಿನ ಮನೆ ಇತ್ತು. ವಾದಪತ್ರದಲ್ಲಿ ಮನೆಯ ವಿಸ್ತೀರ್ಣವನ್ನು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ 300 ಚದುರ ಅಡಿ ಎಸಿಸಿ ಶೀಟಿನ ಮನೆ ಇರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಮನೆಯನ್ನು ನಮ್ಮ ಮಾರಾಟಗಾರರೇ ನಿರ್ಮಾಣ ಮಾಡಿದ್ದರು. ದಾವಾ ಸ್ವತ್ತುಗಳು ನಮಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. 01 ನೇ ಪ್ರತಿವಾದಿಯು ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**